ದಿಃ **21-04-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ರವಿಚಂದ್ರನ್ . ವಕೀಲರಿಂದಃ**

ನನ್ನ ತಾತ ಸುಮಾರು 45 ವರ್ಷಗಳ ಹಿಂದ ತೀರಿಕೊಂಡಿರುತ್ತಾರೆ. ದಾವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸರಕಾರಿ ನೌಕರಿಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅವರು ಕೃಷಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಕೆಎಸ್.ಆರ್.ಟಿ.ಸಿ. ಯಲ್ಲಿ ನೌಕರಿ ಮಾಡಿ ಬಂದ ಆದಾಯದಿಂದ ದಾವ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಭೂ ಸುದಾರಣೆ ಕಾಯಿದೆ ಅಡಿ ಜಮೀನುಗಳು ಸರಕಾರದ ಸ್ವಾದಿನಕ್ಕೆ ಹೋಗುವುದನ್ನು ತಡೆಯುವಗೊಸ್ಕರ ನನ್ನ ತಂದೆ ಕೆಲವು ಆಸ್ತಿಗಳನ್ನು ಪ್ರತಿ ವಾದಿ 5 ಮತ್ತು 6 ಇವರ ಹೆಸರಿನಲ್ಲಿ ಖೀರಿದಿಸಿದ್ದರು ಎಂದರೆ ನಿಜ. ನಂತರ ನಮ್ಮ ಗಮನಕ್ಕೆ ಬರದಂತೆ ಸದರಿ ಆ ಸ್ತಿಯನ್ನು 2, 3 ಮತ್ತು 4 ನೇ ಪ್ರತಿವಾದಿಯರಿಗೆ ಹೆಸರಿಗೆ ವರ್ಗಾವಣೆ ಮಾಡಿರುತಾರೆ. ನಾನು ದಾವ ಆಸ್ತಿಯಲ್ಲಿ ಪಾಲುನೀಡುವಂತೆ ನನ್ನ ತಂದೆಯ ಬಳಿ ಕೇಳಿರಲ್ಲಿ ಎಂದರೆ ಸರಿಯಲ್ಲ. ನಾನು 2 ರಿಂದ 4 ನೇ ಪ್ರತೀವಾದಿಯರ ಜೊತೆಗೆ ಸೇರಿಕೊಂಡು ನನ್ನ ತಂದೆಗೆ ತೊಂದರೆ ಕೊಡುವ ಉದ್ದೆಶದಿಂದ ಸುಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಹಿರಿಯರ ಮೂಲಕ ಜಮಿನಿನಲ್ಲಿ ಪಾಲು ಕೊಡುವಂತೆ ನನ್ನ ತಂದೆಯ ಬಳಿ ಕೇಳಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ನ ಪರ ಶ್ರೀ ಃ ಐಎರಿಪಿ ವಕೀಲರಿಂದಃ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ
**ಸಹಿ/-**
3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.